ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 1, July-August, 2024, Pp. 90-97
©*IIMRD*, Mysuru
IIMRD JOURNALS

www.iimrd.com

# ಭಾರತದಲ್ಲಿ ಚುನಾವಣಾ ಸುಧಾರಣೆಗಳ ಅಗತ್ಯತೆ: ಒಂದು ವಿಶ್ಲೇಷಣೆ

**ನೌಶಾದ್ ಹೆಚ್**
ಸಹಾಯಕ ಪ್ರಾಧ್ಯಾಪಕರು, ಡಿಎಸ್‌ಬಿಜಿ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮೂಡಿಗೆರೆ.

**ಸಾರಾಂಶ: (Abstract)**

*ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಸಂವಿಧಾನದ ನಿರ್ಮಾಪಕರು ಪ್ರತಿನಿಧಿ ಪ್ರಜಾಪ್ರಭುತ್ವವನ್ನು ಅಸ್ತಿತ್ವಕ್ಕೆ ತಂದರು ಪ್ರತಿನಿಧಿ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯಲ್ಲಿ ಚುನಾವಣೆಗಳು ರಾಜಕೀಯದ ಅತ್ಯಂತ ಅವಿಭಾಜ್ಯ ಭಾಗವಾಗಿದೆ. ಅಧಿಕಾರ ಕೇಂದ್ರಗಳೀಗೆ ಚುನಾವಣೆಗಳು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಮುಕ್ತ ಹಾಗೂ ನ್ಯಾಯ ಸಮ್ಮತ್ತ, ನಿರ್ಭೀತ ಚುನಾವಣೆಗಳನ್ನು ನಡೆಸಲು ಸಂವಿಧಾನದ ವಿಧಿ 324 ರಲ್ಲಿ ಸ್ವಾತಂತ್ರ್ಯ, ಸ್ವಯತ್ತ ಸಂವಿಧಾನಾತ್ಮಕ ಚುನಾವಣಾ ಆಯೋಗವನ್ನು ರಚಿಸಲು ಸಂವಿಧಾನವು ಅನುವುಮಾಡಿಕೊಟ್ಟಿದೆ ಇದರ ಅನ್ವಯ ಸ್ವಾತಂತ್ರ್ಯ ಶಾಶ್ವತ ಸಂವಿಧಾನಾತ್ಮಕ ಚುನಾವಣಾ ಆಯೋಗವನ್ನು ಜನವರಿ 26 ರಂದು ಜಾರಿಗೆ ತರಲಾಯಿತು. ಅದೇ ರೀತಿ ಸಂವಿಧಾನದ ಭಾಗ 15 ರಲ್ಲಿ ಚುನಾವಣೆಯ ಬಗ್ಗೆ 324 ರಿಂದ 329 ನೇ ವರೆಗಿನ ವಿಧಿಗಳಲ್ಲಿ ನಮೂದಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಚುನಾವಣಾ ರಾಜಕೀಯದಲ್ಲಿನ ಸಮಸ್ಯೆಗಳು ಮತ್ತು ಇದುವರೆಗೂ ನಡೆದ ಚುನಾವಣಾ ಸುಧಾರಣೆ ಪ್ರಕ್ರಿಯೆಗಳ ಮೇಲೆ ಬೆಳಕು ಚೆಲ್ಲಾಲಾಗಿದೆ ಹಾಗೂ ಇನ್ನಷ್ಟು ಚುನಾವಣಾ ಸುಧಾರಣೆಗಳ ಅವಶ್ಯಕತೆಗಳ ಕಡೆಗೆ ಒತ್ತು ನೀಡಲಾಗಿದೆ.*

**ಮುಖ್ಯಪದಗಳು (Keywords):** ಭಾರತ ಸಂವಿಧಾನ, ಚುನಾವಣಾ ಆಯೋಗ, ಚುನಾವಣಾ ಸುಧಾರಣೆ.

## ಪೀಠಿಕೆ

ಭಾರತದಲ್ಲಿ ಚುನಾವಣೆಗಳನ್ನು ನಡೆಸಲು ಸೂಕ್ತವಾಗುವಂತೆ ಸಂವಿಧಾನವು ನೀಡಲಾಗಿರುವ ಸಲಹೆ ಸೂಚನೆಗಳ ಜೊತೆ ಜೊತೆಗೆ ಸಂಸತ್ತು ಕಾಲದಿಂದ ಕಾಲಕ್ಕೆ ಕೆಲವು ಪ್ರಮುಖ ಕಾನೂನುಗಳನ್ನು ಜಾರಿ ಮಾಡುತ್ತಾ ಬಂದಿದೆ. ಚುನಾವಣೆಗೆ ಸಂಬಂಧಿಸಿ ಜಾರಿಗೊಂಡಿರುವ ಎರಡು ಪ್ರಮುಖ ಕಾಯ್ದೆಗಳು ಅಂದರೆ ಪ್ರಜಾಪ್ರತಿನಿಧಿ ಕಾಯ್ದೆ– 1950 ಮತ್ತು ಪ್ರಜಾಪ್ರತಿನಿಧಿ ಕಾಯ್ದೆ– 1951 ಇಲ್ಲಿ ಮುಖ್ಯವೆನಿಸುತ್ತದೆ. ಪ್ರಜಾಪ್ರತಿನಿಧಿ ಕಾಯ್ದೆ–1950 ರಲ್ಲಿ ಮತದಾರರ ಪಟ್ಟಿ ತಯಾರಿಕೆ ಮತ್ತು ಪರಿಷ್ಕರಣೆಯ ಬಗ್ಗೆ ಮುಖ್ಯವಾಗಿ ಸೂಚನೆಗಳನ್ನು ನೀಡಿತ್ತವೆ ಅದೇ ರೀತಿ ಪ್ರಜಾಪ್ರತಿನಿಧಿ ಕಾಯ್ದೆ–1951 ರಲ್ಲಿ ಚುನಾವಣೆಗಳ ಕೈಗೊಳ್ಳುವಿಕೆ ಮತ್ತು ನಿರ್ವಹಣೆ, ಚುನಾವಣೆ ನಂತರದ ವ್ಯಾಜ್ಯಗಳ ಪರಿಹಾರ ಇತ್ಯಾದಿಗಳ ಬಗ್ಗೆ ವಿವರವಾಗಿ ಸೂಚಿಸಿವೆ.

*Please cite this article as:* ನೌಶಾದ್ ಹೆಚ್. (2024). ಭಾರತದಲ್ಲಿ ಚುನಾವಣಾ ಸುಧಾರಣೆಗಳ ಅಗತ್ಯತೆ: ಒಂದು ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 90–97

ನಂತರದ ಕಾಲದಲ್ಲಿ ಹಲವಾರು ಚುನಾವಣಾ ಸುಧಾರಣಾ ಸಮಿತಿಗಳ ವರದಿಗಳ ಆಧಾರದಲ್ಲಿ ಕಾಲದಿಂದ ಕಾಲಕ್ಕೆ ಸುಧಾರಣಾ ಪ್ರಕ್ರಿಯೆಗಳು ಕೂಡ ಜರುಗಿವೆ. ಚುನಾವಣಾ ಸುಧಾರಣೆಗಳು ಹೆಚ್ಚು ಜನರನ್ನು ಚುನಾವಣಾ ಪ್ರಕ್ರಿಯೆಯ ಅಡಿಯಲ್ಲಿ ತರುವ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಹೆಚ್ಚು ಒಳಗೊಳ್ಳುವಂತೆ ಮಾಡುತ್ತವೆ ಜೊತೆಗೆ ಭ್ರಷ್ಟಾಚಾರವನ್ನು ಕಡಿಮೆಗೊಳಿಸಲು ಮತ್ತು ಭಾರತವನ್ನು ಪ್ರಬಲ ಪ್ರಜಾಪ್ರಭುತ್ವವನ್ನಾಗಿ ಮಾಡಲು ಈ ಚುನಾವಣಾ ಸುಧಾರಣೆಗಳು ಅನುವುಮಾಡಬಹುದು.

**ಸ್ವಾತಂತ್ರ್ಯ ಭಾರತದಲ್ಲಿ ನಡೆದ ಚುನಾವಣಾ ಸುಧಾರಣೆಗಳು**

ಪ್ರಾರಂಭದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆದಿವೆ ಆದರೆ 1967 ರಲ್ಲಿ ನಾಲ್ಕನೇ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಗುಣಮಟ್ಟಗಳ ಕುಸಿತವು ಪ್ರಾರಂಭವಾಯಿತು ಎಂಬ ಅಭಿಪ್ರಾಯವಿದೆ. ಅನೇಕರು ದೇಶದಲ್ಲಿನ ಚುನಾವಣಾ ವ್ಯವಸ್ಥೆಯನ್ನು ರಾಜಕೀಯ ಭ್ರಷ್ಟಾಚಾರದ ಆಧಾರವೆಂದು ಪರಿಗಣಿಸುತ್ತಾರೆ. ಆದರಿಂದ ಕಾಲದಿಂದ ಕಾಲಕ್ಕೆ ಕೆಲವು ಪ್ರಮುಖ ಸುಧಾರಣೆಗಳು ಜಾರಿಗೊಂಡಿವೆ ಮತ್ತು ಇನ್ನಷ್ಟು ಸುಧಾರಣೆಗಳೀಗೆ ಬೇಡಿಕೆಗಳು ಕೇಳಿಬರುತ್ತಿವೆ. ಚುನಾವಣಾ ಸುಧಾರಣೆಗೆ ಸಂಭಂಧಿಸಿದಂತೆ, ಈಗಾಗಲೆ ಕೆಲವು ಸಮಿತಿಗಳು ಕಾರ್ಯನಿರ್ವಹಿಸಿ ಅದರದೇ ಆದ ವೈಚಾರಿಕ–ತಾರ್ಕಿಕ ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅದರಲ್ಲಿ ಕೆಲವು ಪ್ರಮುಖ ಸಮಿತಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

1. ದಿನೇಶ್ ಗೋಸ್ವಾಮಿ ಚುನಾವಣಾ ಸುಧಾರಣಾ ಸಮಿತಿ (1990)
2. ವೋರಾ ಸಮಿತಿ ವರದಿ (1993)
3. ಇಂದ್ರಜಿತ್ ಗುಪ್ತ ಸಮಿತಿ
4. ಚುನಾವಣಾ ಸುಧಾರಣಾ ಕಾಯ್ದೆಗಳಿಗೆ ಸಂಬಂಧಿಸಿದಂತೆ ಕಾನೂನು ಆಯೋಗದ ವರದಿ (1990)
5. ಸಂವಿಧಾನ ಪರಾಮರ್ಶೆ ಆಯೋಗ (2001)
6. ಚುನಾವಣಾ ಆಯೋಗದ ಚುನಾವಣಾ ಸುಧಾರಣೆಗಳ ಪ್ರಸ್ತಾವನೆ (2004)
7. ದ್ವಿತೀಯ ಆಡಳಿತ ಸುಧಾರಣಾ ಆಯೋಗದ ವರದಿ
8. 2014 ರ ಕಾನೂನು ಸಚಿವಾಲಯದ ಸುಧಾರಣಾ ಪ್ರಸ್ತಾವನೆಗಳು

**ಈಗಾಗಲೇ ಕೈಗೊಂಡಿರುವ ಕೆಲವು ಚುನಾವಣಾ ಸುಧಾರಣೆಗಳು**

ಪ್ರಥಮ ಸಾರ್ವತ್ರಿಕ ಚುನಾವಣೆಯ ನಂತರ ಇಲ್ಲಿಯವರೆಗೆ ಹಲವಾರು ಸುಧಾರಣಾ ಪ್ರಕ್ರಿಯೆಗಳು ಜರುಗಿವೆ ಈ ಸಮಿತಿಗಳು ನೀಡಿದ ವರದಿಗಳ ಆಧಾರದಲ್ಲಿ ಹಲವಾರು ಚುನಾವಣಾ ಸುಧಾರಣೆಗಳನ್ನು ಕೈಗೊಳ್ಳಲಾಗಿದೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

**ಮತದಾನದ ವಯಸ್ಸನ್ನು ಕಡಿಮೆಗೊಳಿಸಿರುವುದು**

ಸಂವಿಧಾನದ 61 ನೇ ತಿದ್ದುಪಡಿ ಕಾಯಿದೆಯು ಮತದಾನದ ಕನಿಷ್ಠ ವಯಸ್ಸನ್ನು 21 ರಿಂದ 18 ವರ್ಷಕ್ಕೆ ಇಳಿಸಿದೆ. ಈ ತಿದ್ದುಪಡಿಯು 1989 ರ ಮಾರ್ಚನಿಂದ ಜಾರಿಗೊಂಡಿತು. ಇದರಿಂದ ಯುವ ಮತದಾರರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಏರಿಕೆ ಕಂಡಿದೆ.

**ಪ್ರತಿಪಾದಕರ ಸಂಖ್ಯೆ ಮತ್ತು ಭದ್ರತಾ ಠೇವಣಿಗಳ ಹೆಚ್ಚಳ**

ಸಂಸತ್ತಿಗೆ ಮತ್ತು ರಾಜ್ಯ ಶಾಸಕಾಂಗ ಚುನಾವಣೆಗಳಿಗೆ ನಾಮನಿರ್ದೇಶನ ಪತ್ರಗಳಲ್ಲಿ ಪ್ರಸ್ತಾವಕರಾಗಿ ಸಹಿ ಮಾಡಬೇಕಾದ ಮತದಾರರ ಸಂಖ್ಯೆಯನ್ನು ಕ್ಷೇತ್ರದ ಮತದಾರರಲ್ಲಿ 10% ಕ್ಕೆ ಹೆಚ್ಚಿಸಲಾಗಿದೆ. ಜೊತೆಗೆ ಗಂಭೀರವಲ್ಲದ ಅಭ್ಯರ್ಥಿಗಳನ್ನು ತಡೆಯಲು ಭದ್ರತಾ ಠೇವಣಿಯನ್ನೂ ಕೂಡ ಹೆಚ್ಚಿಸಲಾಗಿದೆ. ಸ್ಪರ್ಧಿಸಿರುವ ಅಭ್ಯಾರ್ಥಿಯು ಒಟ್ಟು ಚಲಾವಣೆಯಾಗಿರುವ ಮತದಾನದ 1/6 ಮತಗಳನ್ನು ಪಡೆಯಲು ಸಾಧ್ಯವಾಗದಿದ್ದರೆ ಠೇವಣಿ ಮೊತ್ತವು ಕಳೆದುಕೊಳ್ಳುತ್ತವೆ

**ವಿದ್ಯುನ್ಮಾನ ಮತಯಂತ್ರ (ಇವಿಎಂ)**

ವಿದ್ಯುನ್ಮಾನ ಮತಯಂತ್ರಗಳನ್ನು 1998 ರಲ್ಲಿ ದೆಹಲಿ, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳ ಚುನಾವಣೆಗಳ ಸಂದರ್ಭದಲ್ಲಿ ಮೊದಲು ಪರಿಚಯಿಸಲಾಯಿತು, ಇವಿಎಂ ಗಳು ಪರಿಣಾಮಕಾರಿ ಮತ್ತು ಪರಿಸರದ ದೃಷ್ಟಿಯಿಂದ ಉತ್ತಮ ಆಯ್ಕೆಯಾಗಿರುವುದರಿಂದ ಈಗ ವ್ಯಾಪಕವಾಗಿ ಬಳಸಲ್ಪಡುತ್ತಿವೆ. ಚುನಾವಣೆ ಪಾರದರ್ಶಕವಾಗಿ ನಡೆಸಲು ಮತ್ತು ಫಲಿತಾಂಶ ಸರಳೀಕರಣಗೊಳಿಸಲು ಇದರಿಂದ ಸಾಧ್ಯವಾಗಿದೆ.

**ಚುನಾವಣಾ ಅಪರಾದಗಳಿಂದ ಶಿಕ್ಷೆಯ ಮೇಲೆ ಅನರ್ಹತೆ**

ಇದು ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ಸ್ಪರ್ಧಿಸುವುದರಿಂದ 6 ವರ್ಷಗಳವರೆಗೆ ವ್ಯಕ್ತಿಯ ಅನರ್ಹತೆಗೆ ಕಾರಣವಾಗುತ್ತದೆ. ನ್ಯಾಯಲಯಗಳಿಂದ ಎರಡು ವರ್ಷಕ್ಕಿಂತ ಹೆಚ್ಚು ವರ್ಷದ ಶಿಕ್ಷೆ ಪ್ರಕಟವಾದರೆ ಅನರ್ಹತೆಗೆ ಒಳಗಾಗುತ್ತಾರೆ.

**ಎರಡಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸಲು ನಿರ್ಬಂಧ**

ಒಬ್ಬ ಅಭ್ಯರ್ಥಿ 2ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತಿಲ್ಲ. ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 33 ರ ಪ್ರಕಾರ ಎರಡಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ತಡೆಯಲಾಗಿದೆ.

**ಉಪ–ಚುನಾವಣೆಗಳಿಗೆ ಸಮಯ ಮಿತಿ**

ಸಂಸತ್ತಿನ ಯಾವುದೇ ಸದನ ಅಥವಾ ರಾಜ್ಯ ಶಾಸಕಾಂಗಕ್ಕೆ ಉಪ–ಚುನಾವಣೆಗಳು ಆ ಸದನದಲ್ಲಿ ಸ್ಥಾನ ಖಾಲಿಯಾದ ಆರು ತಿಂಗಳೊಳಗೆ ನಡೆಸಬೇಕು.

**ಪ್ರಚಾರದ ಅವಧಿಯನ್ನು ಕಡಿಮೆ ಮಾಡಲಾಗಿದೆ:**

ಚುನಾವಣಾ ಅಕ್ರಮಗಳನ್ನು ತಡೆಯಲು ಮತ್ತು ಭ್ರಷ್ಟಚಾರವನ್ನು ನಿಯಂತ್ರಿಸಲು ಪ್ರಚಾರದ ಅವದಿಯನ್ನು ಕಡಿಮೆಗೊಳಿಸಲಾಗಿದೆ.

**ಚುನಾವಣಾ ವೆಚ್ಚದ ಮೇಲಿನ ಮಿತಿ:**

ಪ್ರಸ್ತುತ, ರಾಜಕೀಯ ಪಕ್ಷವು ಚುನಾವಣೆಯಲ್ಲಿ ಅಥವಾ ಅಭ್ಯರ್ಥಿಯ ಮೇಲೆ ಖರ್ಚು ಮಾಡುವ ಮೊತ್ತಕ್ಕೆ ಯಾವುದೇ ಮಿತಿಯಿಲ್ಲ. ಆದರೆ, ಆಯೋಗವು ಅಭ್ಯರ್ಥಿಗಳ ವೈಯಕ್ತಿಕ ವೆಚ್ಚದ ಮೇಲೆ ಮಿತಿ

ಹಾಕಿದೆ. ಲೋಕಸಭೆ ಚುನಾವಣೆಗೆ ಇದು ರೂ. 50 – 70 ಲಕ್ಷ (ಅವರು ಲೋಕಸಭೆ ಸ್ಥಾನಕ್ಕೆ ಸ್ಪರ್ಧಿಸುವ ರಾಜ್ಯವನ್ನು ಅವಲಂಬಿಸಿ), ಮತ್ತು ವಿಧಾನಸಭೆ ಚುನಾವಣೆಗೆ 20–28 ಲಕ್ಷ ರೂ.ಗಳಿಗೆ ಮಿತಿಗೊಳಿಸಲಾಗಿದೆ.

**ಎಕ್ಸಿಟ್ ಪೋಲ್ಗಳಿಗೆ ನಿರ್ಬಂಧ:**

2019ರ ಲೋಕಸಭೆ ಚುನಾವಣೆಗೂ ಮುನ್ನ ಚುನಾವಣಾ ಆಯೋಗವು ಹೇಳಿಕೆ ನೀಡಿದ್ದು, ಅಂತಿಮ ಹಂತದ ಚುನಾವಣೆ ಮುಗಿದ ಬಳಿಕವಷ್ಟೇ ಎಕ್ಸಿಟ್ ಪೋಲ್ ಫಲಿತಾಂಶಗಳನ್ನು ಬಿತ್ತರಿಸಬಹುದು ಎಂದು ಹೇಳಿದೆ. ನಿರೀಕ್ಷಿತ ಮತದಾರರು ಯಾವುದೇ ರೀತಿಯಲ್ಲಿ ದಾರಿ ತಪ್ಪುವುದನ್ನು ಅಥವಾ ಪೂರ್ವಾಗ್ರಹ ಪೀಡಿತರಾಗುವುದನ್ನು ತಪ್ಪಿಸಲು ಇದನ್ನು ಮಾಡಲಾಗಿದೆ.

**ಅಂಚೆ ಮತಪತ್ರದ ಮೂಲಕ ಮತದಾನ:**

2013 ರಲ್ಲಿ, ದೇಶದಲ್ಲಿ ಅಂಚೆ ಮತದಾನದ ವ್ಯಾಪ್ತಿಯನ್ನು ವಿಸ್ತರಿಸಲು ಚುನಾವಣಾ ಆಯೋಗವು ನಿರ್ಧರಿಸಿತು. ಈ ಹಿಂದೆ, ವಿದೇಶದಲ್ಲಿರುವ ಭಾರತೀಯ ಸಿಬ್ಬಂದಿ ಮತ್ತು ಸೀಮಿತ ರೀತಿಯಲ್ಲಿ ರಕ್ಷಣಾ ಸಿಬ್ಬಂದಿ ಮಾತ್ರ ಅಂಚೆ ಮತಪತ್ರಗಳ ಮೂಲಕ ಮತ ಚಲಾಯಿಸಬಹುದಾಗಿತ್ತು. ಈಗ, ಅಂಚೆ ಮತಪತ್ರವನ್ನು ಬಳಸಬಹುದಾದ ಮತದಾರ ವರ್ಗದವರೆಂದರೆ ಸೇವಾ ಮತದಾರರು (ಸೈನಿಕರು,ಪೋಲೀಸ್ ಸಿಬ್ಬಂದಿ,ಇತ್ಯಾದಿ) ಚುನಾವಣಾ ಅಧಿಕಾರಿಗಳು, ಚುನಾವಣಾ ಕರ್ತವ್ಯದಲ್ಲಿರುವ ಸರ್ಕಾರಿ ಅಧಿಕಾರಿಗಳು, ರಾಜತಾಂತ್ರಿಕ ಅಧಿಕಾರಿಗಳು, 80 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ಮತದಾರರು, ಸಕ್ಷಮ್ಯ ಪ್ರಾಧಿಕಾರದಿಂದ ಪ್ರಾಮಾಣಿಕರಿಸಿದ ಅಂಗವಿಕಲ ಮತದಾರರೂ ಮುಂತಾದವರೀಗೆ ಅಂಚೆಮತಪತ್ರದ ಮೂಲಕ ಮತದಾನದ ಅವಕಾಶ ಮಾಡಿಕೊಡಲಾಗಿದೆ.

**ಮತದಾನದ ಜಾಗೃತಿ ಸೃಷ್ಟಿ:**

ಚುನಾವಣಾ ಆಯೋಗದ ಸಂಸ್ಥಾಪನಾ ದಿನವನ್ನು ಗುರುತಿಸಲು ಸರ್ಕಾರವು ಜನವರಿ 25 ಅನ್ನು 'ರಾಷ್ಟ್ರೀಯ ಮತದಾರರ ದಿನ' ಎಂದು ಆಚರಿಸಲು ನಿರ್ಧರಿಸಿದೆ. ಎಲ್ಲಾ ಶಾಲಾ ಕಾಲೇಜುಗಳಲ್ಲಿಯೂ ಚುನಾವಣಾ ಸಾಕ್ಷರತಾ ಸಂಘವನ್ನು ಸ್ಥಾಪಿಸಿ ಜಾಗೃತಿ ಮೂಡಿಸಲಾಗುತ್ತವೆ.ಯುವ ಮತದಾರರು ಮತ್ತು ವಿಧ್ಯಾವಂತರು ಮತದಾನ ಪ್ರಕ್ರಿಯೆಯಲ್ಲಿ ಹೆಚ್ಚು ಭಾಗವಹಿಸಲು ಇದರಿಂದ ಸಾಧ್ಯವಾಗುತ್ತದೆ.

**ಆದಾಯ ತೆರಿಗೆ ಪ್ರಯೋಜನವನ್ನು** ಪಡೆಯಲು ರಾಜಕೀಯ ಪಕ್ಷಗಳು 20000 ರೂ.ಗಿಂತ ಹೆಚ್ಚಿನ ಯಾವುದೇ ಕೊಡುಗೆಯನ್ನು ಪಡೆದರು ಚುನಾವಣಾ ಅಯೋಗಕ್ಕೆ ವರದಿ ಮಾಡಬೇಕಾಗುತ್ತದೆ. ಇದರಿಂದ ಕಪ್ಪು ಹಣವನ್ನು ಚುನಾವಣೆಗೆ ಬಳಕೆಮಾಡುವುದು ತಪ್ಪುತ್ತದೆ.

**ಅಭ್ಯರ್ಥಿಗಳು ಕ್ರಿಮಿನಲ್ ಪೂರ್ವವರ್ತನೆಗಳು,** ಆಸ್ತಿಗಳು ಇತ್ಯಾದಿಗಳನ್ನು ಘೋಷಿಸುವುದು ಅಗತ್ಯವಾಗಿದೆ ಮತ್ತು ಅಫಿಡವಿಟ್ನಲ್ಲಿ ಸುಳ್ಳು ಮಾಹಿತಿಯನ್ನು ಘೋಷಿಸುವುದು ಈಗ ಚುನಾವಣಾ ಅಪರಾಧವಾಗಿದ್ದು 6 ತಿಂಗಳವರೆಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು.

ಇಷ್ಟೆಲ್ಲಾ ಸುಧಾರಣಾ ಪ್ರಕ್ರಿಯೆಗಳು ಕೈಗೊಳ್ಳಲಾಗಿದ್ದರು ಕೂಡ ಚುನಾವಣಾ ರಾಜಕೀಯದಲ್ಲಿ ಸಮಸ್ಯೆಗಳು ಉಲ್ಬವಗೊಳ್ಳುತ್ತಲೇ ಇವೆ.

**ಭಾರತದಲ್ಲಿನ ಚುನಾವಣಾ ರಾಜಕೀಯದಲ್ಲಿನ ಸಮಸ್ಯೆಗಳು**

ಭಾರತದಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಈಗಲೂ ಹಲವಾರು ಸಮಸ್ಯೆಗಳಿವೆ. ಅವುಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ.

**ಹಣಬಲ ಮತ್ತು ತೋಳ್ಬಲದ ಪ್ರಭಾವ**

ಪ್ರತಿ ಕ್ಷೇತ್ರದಲ್ಲೂ ಅಭ್ಯರ್ಥಿಗಳು ಪ್ರಚಾರ, ಇತ್ಯಾದಿಗಳಿಗಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹೆಚ್ಚಿನ ಅಭ್ಯರ್ಥಿಗಳು ಅನುಮತಿಸುವ ವೆಚ್ಚದ ಮಿತಿಯನ್ನು ಮೀರಿ ಖರ್ಚು ಮಾಡುತ್ತಾರೆ. ಪ್ರಸ್ತುತ ಚುನಾವಣೆಯಲ್ಲಿ ಸಿರಿವಂತರು ಮಾತ್ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಸಾಧ್ಯ ಎನ್ನುವ ಸನ್ನಿವೇಶ ನಿರ್ಮಾಣವಾಗಿದೆ. ಇತ್ತೀಚಿನ ಅಸೋಸಿಯೇಶನ್ ಫಾರ್ ಡೆಮಾಕ್ರಾಟಿಕ್ ರಿಫೋರ್ಮ್ಸ್ ವರದಿಯ ಪ್ರಕಾರ 2024 ರ ಲೋಕಸಭೆಗೆ ಆಯ್ಕೆಯಾದವರಲ್ಲಿ ಅತ್ಯಂತ ಶ್ರೀಮಂತರ ಸಂಖ್ಯೆಯು ಒಟ್ಟು ಆಯ್ಕೆಯಾದವರಲ್ಲಿ 93% ಹೆಚ್ಚಿದೆ. ಇದು 2019 ರ ಲೋಕಸಭಾ ಚುನಾವಣೆಯಲ್ಲಿ 88%ವಾಗಿತ್ತು ಮತ್ತು 2014 ರ ಚುನಾವಣೆಯಲ್ಲಿ 82% ಆಗಿತ್ತು.

ದೇಶದ ಕೆಲವು ಭಾಗಗಳಲ್ಲಿ, ಮತದಾನದ ಸಮಯದಲ್ಲಿ ಹಿಂಸಾಚಾರ, ಬೆದರಿಕೆ, ಮತಗಟ್ಟೆ ವಶಪಡಿಸಿಕೊಳ್ಳುವಿಕೆ ಮುಂತಾದ ಅಕ್ರಮ ಮತ್ತು ಅಹಿತಕರ ಘಟನೆಗಳ ವ್ಯಾಪಕ ವರದಿಗಳಿವೆ ತಮ್ಮ ರಾಜಕೀಯ ಪ್ರಭಾವ,ತೋಳ್ಬಲ ಮೂಲಕ ಬೆದರಿಸಿ ರಾಜಕೀಯ ಮಾಡುವವರು ಇದ್ದಾರೆ.

**ರಾಜಕೀಯದ ಅಪರಾಧೀಕರಣ ಮತ್ತು ಅಪರಾಧಗಳ ರಾಜಕೀಕರಣ**

ಕ್ರಿಮಿನಲ್ಗಳು ರಾಜಕೀಯಕ್ಕೆ ಹೆಚ್ಚು ಬರುತ್ತಿದ್ದಾರೆ. ಹಣ ಮತ್ತು ತೋಲ್ಬಲವು ಅವರನ್ನು ಚುನಾವಣೆಯಲ್ಲಿ ಗೆಲ್ಲುವಂತೆ ನೋಡಿಕೊಳ್ಳುತ್ತದೆ, ಆದ್ದರಿಂದ ಅವರ ವಿರುದ್ಧದ ಪ್ರಕರಣಗಳನ್ನು ಮುಂದುವರಿಸಲಾಗುತ್ತಿಲ್ಲ. ಗೆಲ್ಲುವ ಅಭ್ಯರ್ಥಿಗಳು ಇರುವವರೆಗೂ ರಾಜಕೀಯ ಪಕ್ಷಗಳೂ ಖುಷಿಯಾಗಿವೆ. ರಾಜಕೀಯ ಪಕ್ಷಗಳು ಹಣಕ್ಕಾಗಿ ಕ್ರಿಮಿನಲ್ಗಳನ್ನು ಚುನಾವಣೆಗಳಲ್ಲಿ ನಿಲ್ಲಿಸಿ ಅವರಿಗೆ ರಾಜಕೀಯ ಪ್ರೋತ್ಸಾಹ ಮತ್ತು ರಕ್ಷಣೆಯನ್ನು ಒದಗಿಸುತ್ತಿವೆ. 2024ರ ಲೋಕಸಭಾ ಚುನಾವಣಾ ಕಣದಲ್ಲಿ ಇರುವವರಲ್ಲಿ 180 ಮಂದಿಯ ವಿರುದ್ಧ ಲೈಂಗಿಕ ದೌರ್ಜನ್ಯ, ಮಹಿಳೆಯರ ಗೌರವಕ್ಕೆ ಧಕ್ಕೆ ತಂದ ಆರೋಪಗಳಿತ್ತು 14 ಮಂದಿಯ ವಿರುದ್ಧ ಅತ್ಯಾಚಾರ ಆರೋಪಗಳಿತ್ತು. 2024 ರಲ್ಲಿ ಲೋಕಸಭೆಗೆ ಆಯ್ಕೆಯಾದ 251 ಸದಸ್ಯರ ಮೇಲೆ ಕ್ರಿಮಿನಲ್ ಆರೋಪಗಳಿವೆ ಅದರಲ್ಲಿ 171 ಸದಸ್ಯರ ಮೇಲೆ ಅತ್ಯಾಚಾರ, ಕೊಲೆ, ಕೊಲೆಪ್ರಯತ್ನ, ಕಿಡ್ನಾಪಿಂಗ್ ಮುಂತಾದ ಕೇಸ್‌ಗಳಿವೆ.

**ಸರ್ಕಾರಿ ಯಂತ್ರೋಪಕರಣಗಳ ದುರ್ಬಳಕೆ**

ಅಧಿಕಾರದಲ್ಲಿರುವ ಪಕ್ಷವು ಪ್ರಚಾರಕ್ಕಾಗಿ ಸರ್ಕಾರಿ ವಾಹನಗಳನ್ನು ಬಳಸುವುದು, ಬೊಕ್ಕಸದ ವೆಚ್ಚದಲ್ಲಿ ಜಾಹೀರಾತುಗಳು, ಮಂತ್ರಿಗಳ ವಿಲೇವಾರಿಯಲ್ಲಿನ ವಿವೇಚನಾ ನಿಧಿಯಿಂದ ಹಣದ ಬಳಕೆ ಮುಂತಾದ

ಮೂಲಕ ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸಲು ಸರ್ಕಾರಿ ಯಂತ್ರೋಪಕರಣಗಳನ್ನು ದುರ್ಬಳಕೆ ಮಾಡುತ್ತಾರೆ. ಚುನಾವಣಾ ವರ್ಷಗಳಲ್ಲಿ ಗೆಲುವು ಸಾಧಿಸಲು ಹಣದ ದುರುಪಯೋಗ ಮಾಡುವ ಸಾಧ್ಯತೆಗಳು ಹೆಚ್ಚು.

**ಗಂಭೀರವಲ್ಲದ ಸ್ವತಂತ್ರ ಅಭ್ಯರ್ಥಿಗಳು**

ಚುನಾವಣೆಯಲ್ಲಿ ಪ್ರತಿಸ್ಪರ್ಧಿ ಅಭ್ಯರ್ಥಿಗಳಿಗೆ ಹೋಗುತ್ತಿದ್ದ ಮತಗಳ ಉತ್ತಮ ಭಾಗವನ್ನು ಕಡಿತಗೊಳಿಸಲು ಗಂಭೀರ ಅಭ್ಯರ್ಥಿಗಳೊಂದೀಗೆ ಗಂಭೀರವಾಗಿಲ್ಲದ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸುತ್ತಾರೆ ಮತ್ತು ಪ್ರಮುಖ ಸ್ಪರ್ಧಿಗಳ ಹೆಸರಿನಲ್ಲಿರುವವರನ್ನು ಚುನಾವಣೆಗೆ ನಿಲ್ಲಿಸಿ ಮತಗಳನ್ನು ವಿಭಜಿಸುತ್ತಾರೆ.

**ಜಾತೀಯತೆ**

ಕೆಲವು ಜಾತಿ ಗುಂಪುಗಳು ನಿರ್ದಿಷ್ಟ ರಾಜಕೀಯ ಪಕ್ಷಗಳಿಗೆ ಬಲವಾದ ಬೆಂಬಲವನ್ನು ನೀಡುವ ಪ್ರಕರಣಗಳಿವೆ. ಹೀಗಾಗಿ, ರಾಜಕೀಯ ಪಕ್ಷಗಳು ವಿವಿಧ ಜಾತಿ ಗುಂಪುಗಳನ್ನು ಗೆಲ್ಲಲು ಕೊಡುಗೆಗಳನ್ನು ನೀಡುತ್ತವೆ ಮತ್ತು ಜಾತಿ ಗುಂಪುಗಳು ತಮ್ಮ ಸದಸ್ಯರ ಚುನಾವಣೆಗಳಿಗೆ ಟಿಕೆಟ್ ನೀಡಲು ಪಕ್ಷಗಳ ಮೇಲೆ ಒತ್ತಡ ಹೇರಲು ಪ್ರಯತ್ನಿಸುತ್ತವೆ. ದೇಶದಲ್ಲಿ ಜಾತಿ ಆಧಾರದ ಮೇಲೆ ಮತದಾನ ನಡೆಯುತ್ತಿದ್ದು, ಇದು ಪ್ರಜಾಪ್ರಭುತ್ವ ಮತ್ತು ಸಮಾನತೆಗೆ ಗಂಭೀರವಾದ ಕಳಂಕ. ಇದು ದೇಶದಲ್ಲಿ ಬಿರುಕುಗಳನ್ನು ಸಹ ಸೃಷ್ಟಿಸುತ್ತದೆ.

**ಕೋಮುವಾದ**

ಕೋಮು ಧ್ರುವೀಕರಣವು ಭಾರತೀಯ ರಾಜಕೀಯ ನೀತಿಗಳಾದ ಬಹುತ್ವ, ಸಂಸದೀಯತೆ, ಜಾತ್ಯತೀತತೆ ಮತ್ತು ಫೆಡರಲಿಸಂಗೆ ಗಂಭೀರ ಬೆದರಿಕೆಯನ್ನು ಒಡ್ಡುತ್ತಿದೆ. ಇತ್ತೀಚೆಗೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕೋಮುದ್ರುವೀಕರಣಕ್ಕೆ ರಾಜಕೀಯ ಪಕ್ಷಗಳು ಆದ್ಯತೆ ನೀಡುತ್ತಿವೆ

**ರಾಜಕೀಯದಲ್ಲಿ ನೈತಿಕ ಮೌಲ್ಯಗಳ ಕೊರತೆ**

ಭಾರತದಲ್ಲಿನ ರಾಜಕೀಯ ಭ್ರಷ್ಟಾಚಾರವು ರಾಜಕೀಯವು ವ್ಯಾಪಾರವಾಗಲು ಕಾರಣವಾಗಿದೆ. ಜನರು ಹಣ ಸಂಪಾದನೆಗಾಗಿ ಮತ್ತು ತಮ್ಮ ಹಣ ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ರಾಜಕೀಯ ಕ್ಷೇತ್ರಕ್ಕೆ ಬರುತ್ತಾರೆ. ತಮ್ಮ ಜನರ ಜೀವನದಲ್ಲಿ ಬದಲಾವಣೆ ತರಲು ರಾಜಕೀಯಕ್ಕೆ ಬರುವ ನಾಯಕರು ಬಹಳ ಕಡಿಮೆ. ಸೇವೆ ಮತ್ತು ತ್ಯಾಗದ ಗಾಂಧಿಯ ಮೌಲ್ಯಗಳು ಭಾರತೀಯ ರಾಜಕೀಯ ರಂಗದಿಂದ ಕಾಣೆಯಾಗಿವೆ ಎಂದರೆ ತಪ್ಪಾಗಲಾರದು.

**ಇವಿಎಂ ಗೊಂದಲ**

ಇತ್ತೀಚೆಗೆ ಇವಿಎಂ ಗಳ ಕುರಿತು ಹೆಚ್ಚಿನ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ 2019 ರಲ್ಲಿ ಇವಿಎಂ ಕುರಿತು ಶೇಕಡ 57ರಷ್ಟು ಜನರಿಗೆ ವಿಶ್ವಾಸವಿತ್ತು ಆದರೆ ಈಗ ಈ ಪ್ರಮಾಣವು ಕಡಿಮೆಯಾಗಿದೆ ಎಂದು

ಲೋಕನಿತಿ ಸಿಎಸ್‌ಡಿಎಸ್ ಸಂಸ್ಥೆಗಳ ಸಮೀಕ್ಷೆಗಳು ಹೇಳುತ್ತಿವೆ. ಚುನಾವಣೆಗಳಲ್ಲಿ ಮತಪತ್ರಗಳನ್ನು ಬಳಸುವ ವ್ಯವಸ್ಥೆಗೆ ದೇಶ ಹಿಂದುರುಗಬೇಕಿದೆ ಎಂದು ಹೆಚ್ಚಿನ ವಿರೋಧಪಕ್ಷಗಳು ಆಗ್ರಹಿಸುತ್ತಿವೆ.

ಇವಿಎಂಗಳಲ್ಲಿನ ಮತಗಳು ಮತ್ತು ವೆರಿಫೈಯರ್ ಪೇಪರ್ ಆಡಿಟ್– ಟ್ರಯಲ್ ಯಂತ್ರಗಳಲ್ಲಿನ ಮತಗಳನ್ನು ಪೂರ್ಣ ಪ್ರಮಾಣದಲ್ಲಿ ಹೋಲಿಸಿ ನೋಡಬೇಕು ಎಂಬ ಮನವಿಗಳನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

**ದ್ವೇಷ ಭಾಷಣಗಳು**

ಇತ್ತೀಚಿನ ಚುನಾವಣೆಗಳಲ್ಲಿ ದ್ವೇಷ ಭಾಷಣಗಳು ಹೆಚ್ಚಿವೆ. 2024 ರ ಲೋಕಸಭಾ ಚುನಾವಣೆಯನ್ನು ಗಣನೆಗೆ ತೆಗೆದುಕೊಂಡರೆ ಇಡೀ ಚುನಾವಣೆ ಪ್ರಕ್ರಿಯೆಯಲ್ಲಿ ಕಂಡುಬಂದಿದ್ದು ಬರೀ ಒಡಕಿನ ಮಾತು. ದೇಶ ಕಟ್ಟುವ ಮಾತಿಗಿಂತ ಮನಸ್ಸು ವಿಭಜಿಸುವ ಮಾತುಗಳ ವಿಜ್ರಂಭಿಸಿದೆ. ಸಂವಿಧಾನ ಬದಲಾವಣೆ, ಹಿಂದುರಾಷ್ಟ್ರ, ಮೀಸಲಾತಿ, ಸ್ವಾತಂತ್ರ್ಯ ಹೋರಾಟಗಾರರ ಮೇಲಿನ ಆರೋಪಗಳು, ಇತಿಹಾಸ, ಅಲ್ಪಸಂಖ್ಯಾತರು ಮುಂತಾದ ವಿಷಯಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಂದಲೂ ದ್ವೇಷಭಾಷಣಗಳು ಎತ್ತೇಚವಾಗಿ ನಡೆಯಿತು. ಈ ದ್ವೇಷ ಭಾಷಣಗಳು ಯಾವುದೇ ಮುಸ್ಲಿಂ ವ್ಯಕ್ತಿಯನ್ನು ಯಾವುದೇ ಹಿಂದೂ ಯಾವುದೇ ಹಿಂದೂ ವ್ಯಕ್ತಿಯನ್ನು ಯಾವ ಮುಸ್ಲಿಮನು ನಂಬಲು ಆಗದಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿದೆ. ಆದಿ ಬೀದಿಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ದ್ವೇಷದ ಮಾತು ಬರಹಗಳು ರಾರಾಜಿಸುತ್ತಿವೆ.

**ಅಧಿಕಾರಿಗಳ ಆಯ್ಕೆಯಲ್ಲಿ ಪಾರದರ್ಶಕತೆಯ ಪ್ರಶ್ನೆ**

2024ರ 18ನೇ ಲೋಕಸಭಾ ಚುನಾವಣೆಯ ಪ್ರಕ್ರಿಯೆಗಳು ಶುರುವಾಗಲು ಕೆಲವೇ ದಿನಗಳು ಇರುವ ಹೊತ್ತಿನಲ್ಲಿ ಕೇಂದ್ರ ಚುನಾವಣಾ ಆಯೋಗದ ಉನ್ನತ ಹಂತದಲ್ಲಿ ಇರುವ ಇಬ್ಬರಲ್ಲಿ ಒಬ್ಬರು ಚುನಾವಣ ಆಯುಕ್ತರು ರಾಜೀನಾಮೆ ನೀಡಿರುವುದು ಕಳವಳ ಮೂಡಿಸುವ ಸಂಗತಿಯಾಗಿದೆ. ಇತ್ತೀಚಿಗೆ ಇನ್ನೊಬ್ಬ ಚುನಾವಣೆ ಆಯುಕ್ತರು  ನಿವೃತರಾದ ನಂತರ ಆ ಸ್ಥಾನವನ್ನು ತುಂಬಲು ತ್ವರಿತವಾಗಿ ಕ್ರಮ ಕೈಗೊಳ್ಳದೆ ಇರುವುದು ಕೂಡ ಸಮಸ್ಯಾತ್ಮಕವಾಗಿದೆ.

ಕೇಂದ್ರ ಚುನಾವಣಾ ಆಯುಕ್ತರ ನೇಮಕಕ್ಕೆ ಹೊಸ ಕಾನೂನನ್ನು ಕಳೆದ ವರ್ಷ ರೂಪಿಸಿದೆ ನೇಮಕ ಪ್ರಕ್ರಿಯೆಯಲ್ಲಿ ಪಕ್ಷಪಾತದ ಧೋರಣೆ ಇರಬಾರದು ಅಲ್ಲಿ ವಿಶ್ವಾಸಾರ್ಹತೆ ಹೆಚ್ಚಿನ ಮಟ್ಟದಲ್ಲಿ ಇರಬೇಕು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್ ರೂಪಿಸಿದ ಪ್ರಕ್ರಿಯೆಯೊಂದಕ್ಕೆ ವಿರುದ್ಧವಾದ ಪ್ರಕ್ರಿಯೆಯೊಂದನ್ನು ಕೇಂದ್ರ ರೂಪಿಸಿದೆ ಎಂಬ ಆರೋಪವಿದೆ. ಹಟಾತ್ ನೇಮಕ ಹಟಾತ್ ರಾಜೀನಾಮೆಯಂತಹ ಬೆಳವಣಿಗೆಗಳು ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಕುಗ್ಗಿಸಬಹುದು ಚುನಾವಣೆ ನಡೆಯುವ ಪ್ರತಿಯೊಂದು ಹಂತದಲ್ಲಿಯೂ ಚುನಾವಣಾ ಆಯೋಗವು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಸಮರ್ಪಕವಾಗಿ ನಡೆದುಕೊಳ್ಳಬೇಕು.

**ಚುನಾವಣಾ ಬಾಂಡ್**

ಚುನಾವಣಾ ಬಾಂಡ್ಗಳು ಎಂದರೆ ರಾಜಕೀಯ ಪಕ್ಷಗಳೀಗೆ ಧನಸಹಾಯ ಮಾಡಲು ಬಳಸಲಾಗುವ ಒಂದು ರೀತಿಯ ಹಣಕಾಸು ಸಾಧನವಾಗಿದೆ. ಇದನ್ನು 2017ರಲ್ಲಿ ಪರಿಚಯಿಸಲಾಯಿತು. 2024 ರಲ್ಲಿ ಸರ್ವೋಚ್ಚ ನ್ಯಾಯಲಯ ಇದನ್ನು ಅಸಂವಿಧಾನಿಕ ಎಂದು ಹೇಳಿತು. ಇದು ಕೂಡ ಭ್ರಷ್ಟಚಾರಕ್ಕೆ ಅನುವುಮಾಡಿಕೊಡುತ್ತದೆ ಎಂಬ ಆರೋಪವಿದೆ.

**ಉಪಸಂಹಾರ**

ಒಟ್ಟಿನಲ್ಲಿ ಚುನಾವಣೆಗೆ ಸ್ಪರ್ಧಿಸಲು ಕೊಲೆ ಅತ್ಯಾಚಾರ ಅಪಹರಣ ಅಥವಾ ಸುಲಿಗೆಯಂತಹ ಗಂಭೀರ ಅಪರಾಧ ಹಿನ್ನೆಲೆ ಇರುವ ಅಭ್ಯರ್ಥಿಗಳನ್ನು ನಿಷೇಧ ಮಾಡುವುದು, ಅಭ್ಯರ್ಥಿಯು ತನ್ನ ಇಡೀ ಕುಟುಂಬದ ಸದಸ್ಯರ ಆದಾಯದ ಮೂಲ ಘೋಷಣೆ ಮಾಡುವುದು, ಚುನಾವಣಾ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಯಲ್ಲಿ ಸೇವಾ ಹಿರಿತನ ಪರಿಗಣಿಸಿ ಆಯ್ಕೆ ಮಾಡುವುದು ಮತ್ತು ಆಯ್ಕೆಯಲ್ಲಿ ಪಾರದರ್ಶಕತೆ ಕಾಪಾಡುವುದು, ಅಭ್ಯರ್ಥಿಗಳಿಗೆ ಕನಿಷ್ಠ ವಿದ್ಯಾಭ್ಯಾಸವನ್ನು ನಿಗದಿಪಡಿಸುವುದು, ಸಾರ್ವಜನಿಕ ವೆಚ್ಚದಲ್ಲಿ ಪ್ರಚಾರಕ್ಕೆ ನಿಯಂತ್ರಣ ಮಾಡುವುದು ಮುಂತಾದ ಸುಧಾರಣಾ ಪ್ರಕ್ರಿಯೆಗಳನ್ನು ಜಾರಿಗೊಳಿಸಿ ಮೌಲ್ಯದಾರಿತ ಮತ್ತು ಜನಹಿತ ರಾಜಕಾರಣಕ್ಕೆ ಬೆಂಬಲ ನೀಡಿ ಪ್ರಜಾಪ್ರಭುತ್ವವನ್ನು ಬಲಪಡಿಸುವ ಕಾರ್ಯ ಮಾಡಬೇಕಾಗಿದೆ. ಜೊತೆಗೆ ರಾಜಕೀಯ ಕ್ಷೇತ್ರದಲ್ಲಿ ಧರ್ಮದ ದುರುಪಯೋಗವನ್ನು ಪರಿಣಾಮಕಾರಿಯಾಗಿ ತಡೆಯುವಂತೆ ಮಾಡವ ಮೂಲಕ ಸದೃಢ ದೇಶವನ್ನು ಕಟ್ಟಲು ಈ ಚುನಾವಣಾ ವಿಧಾನದಲ್ಲಿ ನಿರಂತರ ಸುಧಾರಣೆಗಳು ಸಹಾಯಕವಾಗಬಹುದು ಒಟ್ಟಿನಲ್ಲಿ ಇದುವರೆಗೂ ಆಗಿರುವ ಚುನಾವಣಾ ಸುಧಾರಣೆಗಳ ಜೊತೆಗೆ ಇನ್ನಷ್ಟು ಸುಧಾರಣೆಗಳು ಆಗಬೇಕಾಗಿದೆ.

**ಆಧಾರ ಗ್ರಂಥಗಳು**


- ಅಂಜನ್ ಕಾವ್ ನಗಟ್. (2007). *ಎಲೆಕ್ಷನ್ಸ್ ಆಂಡ್ ಎಲೆಕ್ಟೋರಲ್ ರಿಫೋರ್ಮ್ಸ್ ಇನ್ ಇಂಡಿಯಾ.* ವಿಕಾಸ್ ಪಬ್ಲಿಷಿಂಗ್ ಹೌಸ್.
- ಅಸೋಸಿಯೇಷನ್ ಫಾರ್ ಡೆಮೋಕ್ರಟಿಕ್ ರಿಫೋರ್ಮ್ಸ್ (ಎ.ಡಿ.ಆರ್) ವರದಿ– 2024
- ರಜನಿ ಕೊಠಾರಿ. (1970). *ಕಾಸ್ಟ್ ಇನ್ ಇಂಡಿಯನ್ ಪೊಲಿಟಿಕ್ಸ್.* ಒರಿಯಂಟ್ ಲೊಂಗ್ಮೆನ್ ಪಬ್ಲಿಕೇಷನ್.
- ರಜನಿ ಕೊಠಾರಿ. (1972). *ಎಲೆಕ್ಷನ್ ರಿಫಾರ್ಮ್ಸ್ ಇನ್ ಇಂಡಿಯಾ: ಎ ಕ್ರಿಟಿಕಲ್ ಅನಾಲಿಸಿಸ್.* ಸೆಂಟರ್ ಫಾರ್ ದಿ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್.
- ಸಿಂಗ್ ಜೋಗಿಂಧರ್. (2010). *ಇಂಡಿಯನ್ ಡೆಮೋಕ್ರಸಿ ಆಂಡ್ ಡಿಸ್ ಅಪೋಯಿಂಟ್ಸ್‌ಮೆಂಟ್.* ಗ್ಯಾನ್ ಪಬ್ಲಿಷಿಂಗ್ ಹೌಸ್.